**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ. 566/2020**

**ಫಿರ್ಯಾದುದಾರರು** : ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿತರು** : ಎ 1. ಶಿವರಾಜ್ ಬಿನ್ ಮುನಿನಾರಾಯಣಸ್ವಾಮಿ,
ವಯಾಃ 24 ವರ್ಷ,
ಎ 2. ಮುನಿನಾರಾಯಣಸ್ವಾಮಿ ಬಿನ್ ಶೆಟ್ಟಿಹಳ್ಳಿ ನಾರಾಯಣಪ್ಪ,
ವಯಾಃ 56 ವರ್ಷ,
ಎ 3. ಶಾಂತಮ್ಮ ಬಿನ್ ಮುನಿನಾರಾಯಣಪ್ಪ,
ವಯಾಃ 45 ವರ್ಷ,

ಆರೋಪಿ 1 ರಿಂದ 3 ರವರ
ವಾಸಃ ಬೊಮ್ಮೆಕಲ್ಲು ಗ್ರಾಮ,
ಚಿಂತಾಮಣಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

: **ದೋಷಾರೋಪಣೆ** :

**ಶ್ರೀಮತಿ.ಹರ್ಷಿತ, ಬಿ.ಎ., ಎಲ್‌ಎಲ್.ಬಿ.,** ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ., ಆದ ನಾನು ಈ ಮೂಲಕ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 14-05-2020 ರಂದು ಬೆಳಿಗ್ಗೆ 10.00 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬೊಮ್ಮೆಕಲ್ಲು ಗ್ರಾಮದ 2 ನೇ ಆರೋಪಿಯಾದ ನೀವು ನಿಮ್ಮ ಮನೆಯ ಬಳಿ ಇರುವ ಸೈಟ್ ನಲ್ಲಿ ನೀರಿನ ಸಂಪ್ ಅನ್ನು ಕಟ್ಟುತ್ತಿದ್ದು, ಆಗ ಚಾಸಾ-1 ರಿಂದ 3 ರವರು ಸ್ಥಳಕ್ಕೆ ಹೋಗಿ 2 ನೇ ಆರೋಪಿಯಾದ ನಿಮ್ಮನ್ನು ಕುರಿತು ಏಕೆ ನಮ್ಮ ಸೈಟಿನಲ್ಲಿ ಸಂಪ್ ಅನ್ನು ಕಟ್ಟುತ್ತಿರುವುದು ಎಂದು ಕೇಳಿದ್ದಕ್ಕೆ ಸ್ಥಳದಲ್ಲಿದ್ದ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರಿಂದ 3 ರವರ ಮೇಲೆ ಜಗಳ ತೆಗೆದು ಚಾಸಾ-1 ರಿಂದ 3 ರವರನ್ನು ಕುರಿತು ಲೇ ಲೋಫರ್ ಸೂಳೆ ನನ್ನ ಮಕ್ಕಳೇ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ **ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಎರಡನೇಯದಾಗಿ**, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 1 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ–1 ರವರ ಎಡಭಾಗದ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಮೂಗೇಟುಂಟು ಮಾಡಿರುತ್ತೀರಿ, ಆ ಮೂಲಕ **ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಮೂರನೇಯದಾಗಿ**, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ 2 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ರವರ ಮೈ–ಕೈ ಮೇಲೆ ಹೊಡೆದು ಮೂಗೇಟುಂಟು ಮಾಡಿರುತ್ತೀರಿ, ಆ ಮೂಲಕ **ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಕೊನೇಯದಾಗಿ**, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ, 3 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ರವರನ್ನು ಕುರಿತು ಸದರಿ ಜಾಗದ ತಂಟೆಗೆ ಬಂದರೆ ನಿನ್ನನ್ನು ಮುಗಿಸಿ ಬಿಡುವುದಾಗಿ ಪ್ರಾಣಬೆದರಿಕೆ ಹಾಕಿರುತ್ತೀರಿ, ಆ ಮೂಲಕ **ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

ಸದರಿ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗಳ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/–**

**ದಿನಾಂಕಃ**10.04.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಚಿಂತಾಮಣಿ.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ. 566/2020**

**ಫಿರ್ಯಾದುದಾರರು:** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿಃ** ಎ 1. ಶಿವರಾಜ್ ಬಿನ್ ಮುನಿನಾರಾಯಣಸ್ವಾಮಿ,

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ** 10.04.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 566/2020</u>**

**<u>ಫಿರ್ಯಾದುದಾರರುಃ</u>** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿಃ</u>** ಎ 2. ಮುನಿನಾರಾಯಣಸ್ವಾಮಿ ಬಿನ್ ಶೆಟ್ಟಿಹಳ್ಳಿ ನಾರಾಯಣಪ್ಪ,

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ** 10.04.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.566/2020**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿಃ** ಎ3. ಶಾಂತಮ್ಮ ಬಿನ್ ಮುನಿನಾರಾಯಣಪ್ಪ,

1. ನೀವು ಮೇಲೆ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ** 10.04.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**